ದಿನಾಂಕ: 02.07.2015 ರ ನಾಲ್ಕನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 196 ಪ್ರಶ್ನೆಗಳ ಪೈಕಿ 167 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಅನುಬಂಧ–1)

ಅಧ್ಯಕ್ಷರು:– ಮಂಡಿಸಲಾಯಿತು.

ಅಧ್ಯಕ್ಷರು:– ಈಗ ಶೂನ್ಯವೇಳೆ.

7. ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1. ವಿಷಯ: ಮಂಡ್ಯ ನಗರದ ನಂದಾ ಚಿತ್ರಮಂದಿರದ ಬಳಿ ಇರುವ ರೈಲ್ವೆ ಮೇಲು ಸೇತುವೆಯನ್ನು ದುರಸ್ತಿಗೊಳಿಸುವ ಬಗ್ಗೆ

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ):– ಮಾನ್ಯ ಅಧ್ಯಕ್ಷರೆ, ಮಂಡ್ಯದಿಂದ ನಾಗಮಂಗಲಕ್ಕೆ ಹೋಗತಕ್ಕಂಥ ಮಂಡ್ಯ ನಗರದ ರಸ್ತೆಯಲ್ಲಿ ಒಂದು ರೈಲ್ವೆ ಹಳಿ ಮೇಲಗಡೆ ಮೇಲ್‌ಸೇತುವೆ ಇದೆ. ಅದು ತುಂಬಾ ಹಳೆಯದಾಗಿದೆ ಮತ್ತು ಅಲ್ಲಿ ಒಂದು ಕಡೆ railway yard ಇದೆ. ಇನ್ನೊಂದು ಕಡೆ ಕಬ್ಬಿನ ಗಾಡಿಗಳು ಮತ್ತು ಲಾರಿಗಳು ಹೋಗತಕ್ಕಂಥದ್ದು ಇದೆ. ಮತ್ತೊಂದು ಸಿಟಿಯಲ್ಲಿ ತಾಲ್ಲೂಕಿಗೆ ಮತ್ತು ಬೇರೆ ಜಿಲ್ಲೆಗೆ ಹೋಗತಕ್ಕಂಥ 100 ಅಡಿ ಉದ್ದದ ರಸ್ತೆಯಲ್ಲಿ 20–30 ಅಡಿ ಎತ್ತರದ ಗೋಡೆ ಇರುವುದರಿಂದ ಕಲ್ಲುಗಳು ಕಳಚಿಕೊಂಡು ಬೀಳುತ್ತಿವೆ, ತುಂಬಾ ಅದ್ವಾನ ಆಗಿರುವುದರಿಂದ ದಯಮಾಡಿ. . . .

ಅಧ್ಯಕ್ಷರು:– ಮಾನ್ಯ ಚಲುವರಾಯಸ್ವಾಮಿಯವರೆ, statement ಇದೆಯೇ ಅಥವಾ ಇಲ್ಲವೇ?

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿಲ್ಲ.

ಅಧ್ಯಕ್ಷರು:– ಆಯಿತು, ಉತ್ತರ ಒದಗಿಸಿಕೊಡುತ್ತಾರೆ.

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಅಧ್ಯಕ್ಷರೆ, ಆ ರಸ್ತೆಯಿಂದ ನೂರಾರು ಜನ ಸಾಯುವಂಥ ಪರಿಸ್ಥಿತಿ ಇದೆ. ದಯಮಾಡಿ, ಆ ಸೇತುವೆಯನ್ನು ರಿಪೇರಿ ಮಾಡದಿದ್ದರೆ . . .

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ಸಚಿವರು):– ಮಾನ್ಯ ಅಧ್ಯಕ್ಷರೆ, ನಾನು ಅರ್ಥ ಮಾಡಿಕೊಂಡಿದ್ದೇನೆ. ಉತ್ತರವನ್ನು ತರಿಸಿ ಕೊಡುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಅಧ್ಯಕ್ಷರೆ, ಉತ್ತರ ತರಿಸುವುದಕ್ಕಿಂತ ಸಂಬಂಧಪಟ್ಟಂಥ ಲೋಕೋಪಯೋಗಿ ಇಲಾಖೆಗೆ ಈ ಸೇತುವೆಯನ್ನು ದುಸ್ಥಿತಿಗೆ ತರುವುದಕ್ಕೆ ನೀವು ನಿರ್ದೇಶನವನ್ನು ಕೊಡಿ ಸಾಕು.

ಅಧ್ಯಕ್ಷರು:– ಆಯಿತು. ಮಾನ್ಯ ಕೋನರೆಡ್ಡಿ ಮಾತನಾಡಿ.

ಶ್ರೀ ಆರ್. ರೋಷನ್ ಬೇಗ್ (ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು):– ಮಾನ್ಯ ಅಧ್ಯಕ್ಷರೆ, ಪ್ರಶ್ನೆ, ಮಂಡ್ಯ ನಗರದ ನಂದಾ ಚಿತ್ರಮಂದಿರದ ಬಳಿ ಇರುವ ರೈಲ್ವೆ ಮೇಲು ಸೇತುವೆಯು 30 ಅಡಿ ಎತ್ತರ ನೂರು ಮೀಟರ್ ಉದ್ದವಿದೆ. ನಾಗಮಂಗಲ, ಶುಗರ್ ಟೌನ್, ಪೇಟೆ ಬೀದಿ, ಮಾರುಕಟ್ಟೆ ಕಡೆಗೆ ಹೋಗುವ ಸಾವಿರಾರು ವಾಹನಗಳು ಈ ಸೇತುವೆಯ ಮೇಲೆ ಓಡಾಡುತ್ತವೆ. ಈ ಸೇತುವೆ ಮೇಲೆ ದ್ವಿಮುಖ ಸಂಚಾರವಿದೆ.

ಈ ಮೇಲು ಸೇತುವೆಗೆ ನಿರ್ಮಿಸಿರುವ ಕಲ್ಲಿನ ತಡೆಗೋಡೆಯ, ಕಲ್ಲುಗಳು ಕಳಚಿಕೊಂಡು 20–30 ಅಡಿ ಕೆಳಕ್ಕೆ ಬೀಳುತ್ತಿವೆ. ಈ ಮೇಲುಸೇತುವೆಯ ಒಂದು ಬದಿಗೆ ರೈಲ್ವೆ ಗೂಡ್ಸ್ ಯಾರ್ಡ್ ಇದ್ದು, ಇಲ್ಲಿ ಸಾವಿರಾರು ಟನ್ ರಸಗೊಬ್ಬರ ಇತರೆ ವಸ್ತುಗಳನ್ನು ಅನ್‌ಲೋಡಿಂಗ್ ಮಾಡಲಾಗುತ್ತಿರುತ್ತದೆ. ಇನ್ನೊಂದು ಬದಿಗೆ ಕೇನ್ ಯಾರ್ಡ್ ಇದ್ದು, ಇಲ್ಲಿ ಕಬ್ಬನ್ನು ತುಂಬಿದ ಲಾರಿಗಳು, ಟ್ರ್ಯಾಕ್ಟರ್‌ಗಳು, ಎತ್ತಿನ ಗಾಡಿಗಳು ನಿಂತಿರುತ್ತವೆ. ಮೇಲುಸೇತುವೆ ತಡೆಗೋಡೆಯ ಕಲ್ಲುಗಳು ಕಳಚಿ ಇಲ್ಲಿರುವ ಜನಗಳ ಮೇಲೆ ಬಿದ್ದು ಅಪಾಯ ಆಗುವ ಸಂಭವ ಇದೆ. ಈಗಾಗಲೇ ಅನೇಕ ಕಲ್ಲುಗಳು ಕಳಚಿ

ಬಿದ್ದು ತಡೆ ಗೋಡೆ ಇಲ್ಲದೇ ಇರುವುದರಿಂದ ವಾಹನಗಳು ಅಪಾಯಕಾರಿಯಾಗಿ ಸಂಚರಿಸುತ್ತಿವೆ. ವಾಹನಗಳೇ ಕೆಳಗೆ ಬೀಳುವ ಸಂಭವ ಇದೆ.

ಆದಕಾರಣ ಕೂಡಲೇ ಈ ಸೇತುವೆಯನ್ನು ದುರಸ್ಥಿಪಡಿಸಿ, ಬಿಗಿಯಾದ ಕಬ್ಬಿಣದ ಗರ್ಡರ್‌ಗಳಿಂದ ಕೂಡಿದ ಗಟ್ಟಿಯಾದ ತಡೆ ಗೋಡೆಯನ್ನು ನಿರ್ಮಿಸಿ ಅಪಾಯವನ್ನು ತಪ್ಪಿಸಬೇಕೆಂದು ಈ ಮೂಲಕ ಸಂಬಂಧಪಟ್ಟ ಸಚಿವರ ಗಮನವನ್ನು ಸೆಳೆಯುತ್ತೇನೆಂದಿದ್ದಾರೆ. ಅದಕ್ಕೆ

ಉತ್ತರ:– ಈ ವಿಷಯದ ಬಗ್ಗೆ ಜಿಲ್ಲಾಡಳಿತ ಮತ್ತು ನೈರುತ್ಯ ರೈಲ್ವೆಯನ್ನು ಸಂಪರ್ಕಿಸಲಾಗಿದ್ದು, ಸದರಿ ಮೇಲು ಸೇತುವೆಯನ್ನು ಆದ್ಯತೆ ಮೇಲೆ ದುರಸ್ಥಿಪಡಿಸಲು ರೈಲ್ವೆ ಇಲಾಖೆಯನ್ನು ಕೋರಲಾಗಿದೆ.

2. ವಿಷಯ: ಹವಾಮಾನ ಬೆಳೆ ವಿಮಾ ಯೋಜನೆಯಿಂದ ರೈತರಿಗೆ ಅನುಕೂಲ ಇದೆಯೇ ಎಂಬ ಬಗ್ಗೆ ಅಧಿಕಾರಿಗಳ ಜೊತೆ ಚರ್ಚಿಸಿ ಒಂದು ದಿಟ್ಟ ನಿರ್ಧಾರವನ್ನು ರೈತರ ಪರ ಕೈಗೊಳ್ಳುವ ಬಗ್ಗೆ.

ಶ್ರೀ ಎನ್.ಹೆಚ್. ಕೋನರೆಡ್ಡಿ (ನವಲಗುಂದ):– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಹವಾಮಾನ ಬೆಳೆ ವಿಮೆ ಜಾರಿಯಲ್ಲಿದ್ದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದೊಂದಿಗೆ ನಡೆಯುತ್ತಿದೆ. ಈ ಯೋಜನೆ ಎಲ್ಲ ಗ್ರಾಮ ಪಂಚಾಯತ್ ಮಳೆ ಮಾಪನ ಕೇಂದ್ರದಿಂದ ವರದಿ ಪಡೆದುಕೊಂಡು ರೈತರಿಗೆ ಬೆಳೆ ವಿಮೆ ತುಂಬಿದ ಮೇಲೆ ನಿರ್ಧಾರವಾಗುತ್ತದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಇದು ಬಹಳ ಗಂಭೀರವಾದಂಥ ಸಮಸ್ಯೆ. ನಮ್ಮ ಜಿಲ್ಲೆಯಲ್ಲಿ 23 ಕೋಟಿ ಹಣವನ್ನು ತುಂಬಿದ್ದಾರೆ.

ಅಧ್ಯಕ್ಷರು:– ಮಾನ್ಯ ರೆಡ್ಡಿಯವರೆ, ಚರ್ಚೆಗೆ ಅವಕಾಶ ಇಲ್ಲ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಮಾನ್ಯ ಅಧ್ಯಕ್ಷರೆ, 15 ಕೋಟಿ ರೂಪಾಯಿಗಳು ಬಂದಿದೆ.